**ಎರಡನೇ ಹೆಚ್ಚುವರಿ ವ್ಯವಹಾರ  ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಭದ್ರಾವತಿ**

**ಸಿಸಿ ಸಂಖ್ಯೆ 2812/2025**

ಪಿರ್ಯಾದುದಾರರುಃ ಹೆಚ್ ಎನ್ ದಿನೇಶ್ ಬಿನ್ ಲೇಟ್ ಟಿ ನಂಜಪ್ಪ,
ವಯಸ್ಸು 55 ವರ್ಷ,
ವಾಸಃ ಹಂಸವೇಣಿ ನಿಲಯ, ಕೆ ಸಿ ಮುಖ್ಯ ರಸ್ತೆ,
ಜನ್ನಾಪುರ, ಭದ್ರಾವತಿ.

ವಿರುದ್ಧ

ಆಪಾದಿತಃ ಎಂ ಸಂತೋಷ ಕುಮಾರ ಬಿನ್ ಬಿ ಪಿ ಮಂಜಪ್ಪ,
ವಯಸ್ಸು 38 ವರ್ಷ,
ವಾಸಃ ಬಾಳೆಗುಂಡಿ, ಉಳ್ಳೂರು, ಸಾಗರ ತಾಲ್ಲೂಕು.

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ 1– ಪಿರ್ಯಾದುದಾರರ ಪರ ವಿಚಾರಣೆ ಮಾಡಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ 2– ಫ್ರಾಸಾ 1 ಹೆಚ್ ಎನ್ ದಿನೇಶ್ ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ನೀವು ನಿಮ್ಮ ಗೃಹ ಖರ್ಚು ವೆಚ್ಚಗಳಿಗೆ  ಮತ್ತು ಹಣಕಾಸಿನ ಅವಶ್ಯಕತೆಗೆ  ದಿನಾಂಕ 19.11.2019 ರಂದು  ರೂ.10,00,000/– ಹಣವನ್ನು ತನ್ನಿಂದ ಸಾಲವಾಗಿ ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆ.3– ಫ್ರಾಸಾ 1 ರವರು ಮುಂದುವರೆದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ನೀವು ರೂ.7,50,000/– ಗಳನ್ನು ಹಿಂತಿರುಗಿಸಿದ್ದು, ಉಳಿದ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಇರುವ ಬ್ಯಾಂಕ್ ಆಫ್ ಬರೋಡ, ಜೋಗ ರಸ್ತೆ, ಸಾಗರ ಕ್ಕೆ ಸೇರಿದ ಪೋಸ್ಟ್ ಡೇಟೆಡ್ ಚೆಕ್ ಸಂಖ್ಯೆ 000005 ರಲ್ಲಿ ರೂ.3,50,000/– ದಿನಾಂಕ 03.03.2025 ಎಂದು ನಮೂದಿಸಿ ಸಹಿ ಮಾಡಿದ ಚೆಕ್ ಅನ್ನು ತನಗೆ ನೀಡಿರುತ್ತೀರಾ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆ 4– ಫ್ರಾಸಾ 1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಚೆಕ್ಕನ್ನು ನಗದೀಕರಿಸಲು ತಾನು ತನ್ನ ಖಾತೆ ಹೊಂದಿರುವ ಆಕ್ಸಿಸ್ ಬ್ಯಾಂಕ್, ಹಳೇ ನಗರ ಶಾಖೆ, ಭದ್ರಾವತಿ ಇಲ್ಲಿಗೆ ಹಾಜರುಪಡಿಸಿದ್ದು, ಸದರಿ ಚೆಕ್ಕು ಅಮಾನ್ಯಗೊಂಡು ದಿನಾಂಕ 04.03.2025 ರಂದು ಖಾತೆಯಲ್ಲಿ "Funds Insufficient" ಎಂಬ ಷರಾದೊಂದಿಗೆ ವಾಪಸ್ಸು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆ 5– ಫ್ರಾಸಾ 1 ರವರು ಮುಂದುವರೆದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 14.03.2025 ರಂದು ಆರೋಪಿಗೆ ಪಿರ್ಯಾದುದಾರರು ಅವರ ವಕೀಲರ ಮೂಲಕ ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ನೋಟೀಸನ್ನು ಕಳುಹಿಸಿದು, ಮತ್ತು ಸದರಿ ತಿಳುವಳಿಕೆ ನೋಟೀಸು ನಿಮಗೆ ಜಾರಿಯಾಗಿದ್ದರೂ ಸಹ ನೀವು ಇದುವರೆಗೂ ಸಾಲದ ಹಣವನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆ 6 – ಫ್ರಾಸಾ 1 ರವರು ಮುಂದುವರೆದು ನುಡಿದಿರುವುದೇನೆಂದರೆ ಆರೋಪಿಗೆ ಖಾತೆಯಲ್ಲಿ ನಿಗದಿತ ಮೊತ್ತದ ಹಣವನ್ನು ಹೊಂದದೇ ಚೆಕ್‌ನ್ನು ನೀಡಿ ಹಾಗೂ ಫ್ರಾಸಾ.1 ರವರಿಗೆ ಹಣವನ್ನು ನೀಡದೇ ಚೆಕ್ಕನ್ನು ನೀಡಿ ನೆಗೋಷಿಯಬಲ್ ಇನ್

ಸ್ಟ್ರೂಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ಆರೋಪವನ್ನು ಎಸಗಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆ 7– ನಿಮ್ಮ ಪರವಾಗಿ ಯಾರನ್ನಾದರೂ ವಿಚಾರಣೆ ಮಾಡುವಿರಾ?

ಉತ್ತರಃ

ಪ್ರಶ್ನೆ 8–ನೀವು ಮತ್ತೇನಾದರೂ ಹೇಳುವುದು ಇದೆಯಾ?

ಉತ್ತರಃ

(ಮೇಲ್ಕಂಡ ಹೇಳಿಕೆಯನ್ನು ಆರೋಪಿ ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಹೇಳಿದ್ದು ಇವು ಸತ್ಯ ಸಂಗತಿಯನ್ನು ಒಳಗೊಂಡಿದೆ ಎಂದು ದೃಢೀಕರಿಸುತ್ತೇನೆ.)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಭದ್ರಾವತಿ.

ದಿನಾಂಕಃ 27–07–2026

ಆರೋಪಿ ಸಹಿಃ